ಉರ್ದು ಮೂಲ: ಜೀಲಾನಿ ಬಾನೋ
ಕನ್ನಡಕ್ಕೆ: ಡಿ.ಎನ್.ಶ್ರೀನಾಥ್

# ಅಪರಾಧಿ



ಚಿತ್ರ: ಶಿಲ್ಪಾ ಕಬ್ಬಿಣಕಂತಿ

ನೀನೊಬ್ಬ ಲಜ್ಜೆಯಿಲ್ಲದ, ನಾಚಿಕೆಯಿಲ್ಲದ ಮನುಷ್ಯ ಅಂತ ಒಪ್ಕೋತೀಯಾ? ನೀನು ರಸ್ತೆಯಲ್ಲಿ ನಿನ್ನ ದೇಹದ ಭಾಗಗಳು ಮುಚ್ಚದಂತಹ ಹರಕು ಬಟ್ಟೆ ತೊಟ್ಟು ಅಡ್ಡಾಡ್ತೀಯ. ನೀನು ನಿನ್ನ ತೆರೆದ ದೇಹ ಪ್ರದರ್ಶಿಸಲು ಗರ್ಲ್ಸ್ ಕಾಲೇಜಿನೆದುರು ಕೂತಿರ್ತೀಯ! ನಿನ್ನ ನೋಡಿ ಕಾಲೇಜಿನ ಹುಡುಗಿಯರು ನಾಚಿಕೆಯಿಂದ ಮುಖವನ್ನು ಮುಚ್ಚಿಕೊಳ್ತಾರೆ.

ನೀನು ಅಂಗವಿಕಲನೆಂಬ ನೆಪವೊಡ್ಡಿ ನಿನ್ನ ಕುಲದ ಜವಾಬ್ದಾರಿಯನ್ನು ಕೈಬಿಟ್ಟಿದ್ದೀಯ. ನೀನು ನಿನ್ನ ಮಗುವಿನ ಕೈಯಲ್ಲಿದ್ದ ಬ್ರೆಡ್ ಕಸಿದುಕೊಂಡು ಮಗುವನ್ನು ದೂರಕ್ಕೆ ತಳ್ಳಿದ್ದೆ. ನೀನೊಬ್ಬ ಉದ್ಯೋಗಸ್ಥ, ಕೊಲೆಗಡುಕ. ನೀನು ಇದುವರೆಗೆ ನಾಲ್ಕು ಕೊಲೆಗಳನ್ನು ಮಾಡಿದ್ದೀಯ. ರಾಜಕಾರಣಿಯೊಬ್ಬ ತನ್ನ ಕೆಲಸವನ್ನು ನಿನ್ನಿಂದ ಮಾಡಿಸಿಕೊಂಡು ನಿನಗೆ ನೂರರ ನೋಟನ್ನು ಕೊಡಲು ಬಂದಾಗ ಅವನನ್ನು ಕೊಂದಿದ್ದೆ. ತಿನಿಸುಗಳ ವ್ಯಾಪಾರಿಯೊಬ್ಬ ಹಾಳಾಗುವಂಥ ತಿನಿಸುಗಳನ್ನು ಕಸದ ರಾಶಿಗೆ ಎಸೆಯುತ್ತಿದ್ದರಿಂದ ಆ ವ್ಯಾಪಾರಿಯನ್ನು ನೀನು ಕೊಂದಿದ್ದೆ. ನೀನು ಢೋಂಗಿ ಸೃಷ್ಟಿಸುವ ವೇಷಧಾರಿ.

ನೀನು ಆಡಳಿತ ನಡೆಸುವ ಪಕ್ಷಕ್ಕೆ ಬೆಂಬಲ ಕೊಡ್ತೀಯ. ನಿನಗೆ ಯಾವುದೇ ಧರ್ಮವಿಲ್ಲ. ನಿನ್ನ ಹೆಸರು ಖಾಲಿಕ್. (ಸೃಷ್ಟಿಕರ್ತ) ಆದರೆ ನೀನೆಂದೂ ಮಸೀದಿಗೆ ಹೋಗಲಿಲ್ಲ. ನಮಾಜು ಆಗುವಾಗ ಮತ್ತು ಮುಲ್ಲಾ ಖುದಾನ ಪರವಾಗಿ ನಮಾಜಿಗೆ ಕರೆಯುವಾಗ ನೀನು ಮಸೀದಿ ಎದುರು ನಿಂತು ಸದ್ದು ಸದ್ದು ಎಂದು ಕೂಗ್ತೀಯ. ನೀನು ಮೋಸಗಾರ. ನಿನಗೆ ಭಿಕ್ಷೆ ಹಾಕಿದಾಗ ನೀನು ಆ ನಾಣ್ಯಗಳ ಮೇಲೆ ಉಗಿದು, ಅದನ್ನು ವಾಪಸ್ ಕೊಡ್ತೀಯ. ನೀನು ಬಟ್ಟೆಗಳ ಭವ್ಯ ಅಂಗಡಿಯೆದುರು ಕೂತಿರ್ತೀಯ. ನಿನ್ನ ದೇಹದ ಕೊಳಕು ಮತ್ತು ನಿನ್ನ ಕೆಟ್ಟ ಮುಖ ನೋಡಿ, ಅಂಗಡಿಗೆ ಬರುವ ಗ್ರಾಹಕರು ವಾಪಸ್ ಹೋಗ್ತಾರೆ. ಅದೆಷ್ಟೋ ಸಲ ನಿನ್ನನ್ನು ಅಲ್ಲಿಂದ ಓಡಿಸಿದರೂ ಉಪಯೋಗವಾಗಲಿಲ್ಲ.

ನೀನು ಮನುಷ್ಯನಲ್ಲ, ಬೀದಿ ನಾಯಿಗಳೊಂದಿಗೆ ತಿಪ್ಪೆರಾಶಿಯಲ್ಲಿ ಬಿದ್ದಿದ್ದ ಎಲುಬು ಮತ್ತು ಮಲಮೂತ್ರಗಳ ಕಾಗದಗಳನ್ನು ತಿನ್ತಿರ್ತೀಯ. ನೀನು ನಾಯಿ ಮರಿಗಳೊಂದಿಗೆ ಫುಟ್ ಪಾತ್‌ನಲ್ಲಿ ನಿದ್ದೆ ಮಾಡ್ತೀಯ. ನೀನು ರಥಯಾತ್ರೆಯಲ್ಲಿ, ಜಯ್ ರಾಮ್, ಜಯ್ ರಾಮ್ ಎಂದು ಘೋಷಣೆ ಕೂಗ್ತೀಯ.

ಹೇಳು...ಉತ್ತರಿಸು , ನೀನು ಮೌನವಾಗಿರುವ ಕಲೆಯನ್ನು ಕರಗತ ಮಾಡಿಕೊಂಡಿದ್ದೀಯ! ನೀನು ಮುಖ್ಯಮಂತ್ರಿಗಳ ಕಾರಿಗೆ ಕಲ್ಲು ಹೊಡೆದಿದ್ದರಿಂದ ಅವರ ಡ್ರೈವರ್‌ಗೆ ಪೆಟ್ಟು ಬಿದ್ದಿದೆ. ನೀನು ರಸ್ತೆಗಳಲ್ಲಿ ಪ್ರೈಮ್ ಮಿನಿಸ್ಟರ್ ಮತ್ತು ಪ್ರೆಸಿಡೆಂಟರನ್ನು ನಿಂದಿಸುತ್ತೀಯ.

ದೇಶಕ್ಕಿಂತ ನಾವು ದೊಡ್ಡವರೆಂದು ತಿಳಿದುಕೊಳ್ಳುವುದು ಮೂರ್ಖತನವೆಂದು ನಿನಗೆ ತಿಳಿದಿಲ್ಲವೆ? ಸಂತೆಯಲ್ಲಿ ನೀನು ಕೂತ ಕಡೆ ಜನರನ್ನು ಕಲೆ ಹಾಕಿ ಬಿಡ್ತೀಯ! ನಿನ್ನ ಹೆಂಡ್ತಿ ಮಕ್ಕಳು ನಿನ್ನನ್ನು ಗುರುತಿಸಲು ಇಷ್ಟಪಡಲ್ಲ. ವೈದ್ಯರ ವರದಿ ಪ್ರಕಾರ ನೀನು ಹುಚ್ಚನಲ್ಲ, ಹೀಗಾಗಿ ನಿನ್ನನ್ನು ಯಾವ ಹಾಸ್ಟೆಲ್‌ನಲ್ಲೂ ಇಟ್ಟುಕೊಳ್ಳಲು ಸಾಧ್ಯವಿಲ್ಲ.

ನೀನು ಭಿಕ್ಷುಕನಲ್ಲ, ಹೀಗಾಗಿ ಯಾವುದೇ ಧರ್ಮಛತ್ರ ಅಥವಾ ಹೋಮ್ ನಿನ್ನನ್ನಿಟ್ಟುಕೊಳ್ಳಲು ಸಿದ್ಧವಿಲ್ಲ. ನೀನು ಹುಚ್ಚನೆಂಬಂತೆ ನಟಿಸ್ತೀಯ. ಆಕಾಶಕ್ಕೆ ಕಲ್ಲು ಎಸೀತೀಯ ಮತ್ತು ದುಃಖಗಳು ಮೇಲಿನಿಂದ ಬರುತ್ತವೆ ಎಂದು ಹೇಳ್ತೀಯ! ನೀನು ಸಾಚಾ ಅನ್ನೋದಕ್ಕೆ ಏನಾದರೂ ಹೇಳಲು ಇಷ್ಟಪಡ್ತೀಯಾ? ನ್ಯಾಯಾಧೀಶರೆದುರು ಸತ್ಯವನ್ನೇ ಹೇಳುವೆ, ಬೇರೇನೂ ಹೇಳುವುದಿಲ್ಲವೆಂದು ನೀನು ಪ್ರತಿಜ್ಞೆ ಮಾಡಬೇಕಾಗುತ್ತೆ. ನೆನಪಿರಲಿ. ನೀನು ಉತ್ತಮ ನಡತೆಯುಳ್ಳ ಭಿಕ್ಷುಕರಂತೆ ಭಿಕ್ಷೆ ಬೇಡಲು ಸಾಧ್ಯವಿರಲಿಲ್ವಾ?

ಇಷ್ಟೊಂದು ಕೊಲೆಗಳನ್ನು ಮಾಡಿದ್ದೀಯ, ಆದ್ರೆ ಎರಡು ಗಜ ಬಟ್ಟೆಯನ್ನು ಕದ್ದು ನಿನ್ನ ದೇಹ ಮುಚ್ಚಿಕೊಳ್ಳಲು ಸಾಧ್ಯವಿಲ್ವಾ? ಉತ್ತರಿಸು!

ನಿನ್ನ ಮೌನ ನಿನ್ನ ಅಪರಾಧವನ್ನು ರುಜುವಾತು ಮಾಡುತ್ತಿದೆ.

ಮೈ ಲಾರ್ಡ್.. ಅಪರಾಧಿಯ ಮೌನ, ಅಪರಾಧಿ ತನ್ನ ಅಪರಾಧವನ್ನು ಒಪ್ಪಿಕೊಂಡಿದ್ದಾನೆಂದು ಹೇಳುತ್ತಿದೆ...

ಮೈ ಲಾರ್ಡ್! ಈ ಕೇಸು ಕೊನೆಗೊಳ್ಳುವುದಕ್ಕೂ ಮೊದಲು ನಾನು ಸ್ವಲ್ಪ ಮಾತನಾಡಲು ಬಯಸುವೆ.

ನೀನ್ಯಾರು?...ಯಾರ ವಕೀಲ?

ನಾನು ಕಾನೂನು, ಸಭ್ಯತೆ, ನಾಗರಿಕತೆ, ಸಮಾಜ ಈ ಎಲ್ಲದರ ವಕಾಲತ್ತು ವಹಿಸುತ್ತಿದ್ದೇನೆ. ಮೈ ಲಾರ್ಡ್...ಈ ಅಪರಾಧಿ ಸಾಯುವಂಥ ಶಿಕ್ಷೆಯನ್ನು ವಿಧಿಸಬಾರದೆಂಬುದು ನನ್ನ ಅಭಿಪ್ರಾಯವಾಗಿದೆ...ಈ ವ್ಯಕ್ತಿ ಸತ್ತರೆ ಜಗತ್ತಿನ ಸಮಸ್ಯೆಗಳೆಲ್ಲವೂ ಸತ್ತು ಹೋಗುತ್ತವೆ...ನಾವು ಯಾರಿಗೆ ಭಿಕ್ಷೆ ಹಾಕೋಣ?...ಖುದಾನ ಭಯಕ್ಕೆ ಹೆದರುವ ಮನುಷ್ಯನನ್ನು ಎಲ್ಲಿಂದ ತರೋಣ?...ಒಂದು ವೇಳೆ ಇವನಿಗೆ ಇಂದು ಗಲ್ಲು ಶಿಕ್ಷೆ ವಿಧಿಸಿದರೆ, ಸುಪ್ರೀಂ ಕೋರ್ಟ್‌ನ ಅಗತ್ಯವೇ ಇರುವುದಿಲ್ಲ..

ಮೈ ಲಾರ್ಡ್! ಅಪರಾಧಿಯ ಅಸ್ತಿತ್ವ ನಮ್ಮ ಅಸ್ತಿತ್ವಕ್ಕೆ ಅಗತ್ಯವಾಗಿದೆ ಎಂದು ಹೇಳಲು ಅನುಮತಿ ಕೊಡಿ.. ಅಪರಾಧಿಗೆ ಜೀವಾವಧಿ ಶಿಕ್ಷೆಯೇ ಯೋಗ್ಯವಾಗಿದೆ..!